# ದೇವಿಯ ಆರಾಧನೆ

ಡಾ. ಕೆ.ಎಲ್.ಪ್ರಸನ್ನಾಕ್ಷೀ

ಅನಾದಿಕಾಲದಿಂದಲೂ ಪ್ರಚಲಿತವಾಗಿದ್ದ, ಇಂದಿಗೂ ಇರುವ ಮಾತೃ ಆರಾಧನೆಯ ಮೂರ್ತರೂಪವೇ ದುರ್ಗಾಪೂಜೆ. ನಮ್ಮ ಸಂಸ್ಕೃತಿಯಲ್ಲಿ ದೇವಿಯ ಆರಾಧನೆ ಎಲ್ಲ ವೈವಿಧ್ಯತೆಗಳಿಂದ, ಶ್ರದ್ಧಾಭಕ್ತಿಗಳಿಂದ ಆಚರಿಸಲ್ಪಡುತ್ತದೆ. ಇದರ ಮಹತ್ವವನ್ನು ಇಲ್ಲಿ ನೀಡಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.


ನಮ್ಮ ಬದುಕಿನಲ್ಲಿ ಮನಸ್ಸಿನ ಪಾತ್ರ ಬಹಳ ದೊಡ್ಡದು. ಒಂದು ಅಭಿಪ್ರಾಯದಲ್ಲಿ ಈ ಮನಸ್ಸೇ ಮಾಯೆ. ಈ ಮನಸ್ಸು ಸಂಕಲ್ಪ ವಿಕಲ್ಪಾದಿ ಸ್ವಭಾವಗಳನ್ನು ಹೊಂದಿದೆ. ಅದರಲ್ಲಿ ಅಂಟಿಕೊಳ್ಳುವುದೂ ಇದರ ಒಂದು ಸ್ವಭಾವ. ಏನಾದರೂ ವಸ್ತು ಯಾವುದೋ ವ್ಯಕ್ತಿ, ಭಾವ... ಹೀಗೆ ಅದಕ್ಕೆ ಅಂಟಿಕೊಳ್ಳಲು ಒಂದು ಆಸರೆ ಬೇಕು. ಲೌಕಿಕವಾದ ವಸ್ತು, ವ್ಯಕ್ತಿ, ಭಾವಾದಿಗಳೆಲ್ಲ ಶಾಶ್ವತವಲ್ಲ. ಅವು ಎಲ್ಲಿಯವರೆಗೆ ಇರುತ್ತವೆ, ಯಾವಾಗ ಕಿತ್ತುಕೊಂಡು ಹೋಗುತ್ತವೆ ಗೊತ್ತಾಗುವುದಿಲ್ಲ. ಈ ಬಂಧ ಅಥವಾ ಈ ಅಂಟಿಗೆ ಆದ ಧಕ್ಕೆ ಮನಸ್ಸಿಗೆ ಸುಖ-ದುಃಖ-ಮಾನಾಪಮಾನಾದಿಗಳನ್ನು ಉಂಟುಮಾಡುತ್ತವೆ. ಇದೇ ಜೀವಿಗೆ ಬೇರೆ ಬೇರೆ ಜನ್ಮ, ಬೇರೆ ಬೇರೆ ಶರೀರಪ್ರಾಪ್ತಿಗೆ ಕಾರಣವಾಗುತ್ತದೆ. ಇದರಿಂದ ಜೀವಿ ಜನನ ಮರಣ ಚಕ್ರದಲ್ಲಿ ಸುತ್ತುತ್ತಲೇ ಇರುತ್ತದೆ. ಹೀಗಾಗದಂತೆ ಆಗಬೇಕಾದರೆ ಮನಸ್ಸಿಗೆ ಒಂದು ಸರಿಯಾದ, ಕದಲದ ದೃಢ ಆಸರೆ ಬೇಕು. ಅದು ಭಗವಂತನಾದರೆ ಒಳ್ಳೆಯದು ಎಂದು ನಮ್ಮ ಋಷಿಗಳು ಮಾನವನಿಗೆ ಭಗವದಾಲಂಬನದೊಡನೆ ಜೀವನ ಸಾಗಿಸಬೇಕೆಂದು ಬೋಧಿಸಿದ್ದಾರೆ.

## ಭಗವಂತನ ಸ್ವರೂಪ

ಈ ಭಗವಂತನಿಗೆ ನಿರ್ದಿಷ್ಟವಾದ ರೂಪ, ಆಕಾರ, ಗುಣ, ಸ್ವಭಾವ ಇತ್ಯಾದಿಗಳಿಲ್ಲ. ಯಾರು ಯಾರು ಹೇಗೆ ಹೇಗೆ ಭಾವಿಸಿದರೆ ಹಾಗೆಯೇ ಅವನು ಅವರವರ ಶ್ರದ್ಧೆ, ಭಕ್ತಿಗನುಗುಣವಾಗಿ ಅವರವರ ಅನುಭವಕ್ಕೆ ಬರುತ್ತಾನೆ.

**ತ್ವಂ ಸ್ತ್ರೀ ತ್ವಂ ಪುಮಾನಸಿ ತ್ವಂ ಕುಮಾರ ಉತ ವಾ ಕುಮಾರೀ ।**
**ತ್ವಂ ಜೀರ್ಣೋ ದಂಡೇನ ವಂಚಸಿ ತ್ವಂ ಜಾತೋ ಭವಸಿ ವಿಶ್ವತೋಮುಖಃ ॥**

— ಎಂಬ ಶ್ವೇತಾಶ್ವತರ ಉಪನಿಷತ್ತಿನ ವಾಣಿ ಇದನ್ನು ದೃಢಪಡಿಸುತ್ತದೆ. ಕೃಷ್ಣನೂ ಭಗವದ್ಗೀತೆಯಲ್ಲಿ , **'ಯೋ ಯೋ ಯಾಂ ಯಾಂ ತನುಂ ಭಕ್ತಃ ಶ್ರದ್ಧಯಾರ್ಚಿತುಮಿಚ್ಛತಿ'** ಎಂದು ಹೇಳಿದ್ದಾನೆ. ಭಗವಂತ ಅವರವರ ಭಾವಕ್ಕೆ ತಕ್ಕಂತೆ ಆಯಾ ರೂಪವನ್ನು ಧರಿಸಿ ಅವರಿಗೆ ಆಸರೆಯಾಗಿ ನಿಂತು ಅವರ ಆರಾಧನೆಯನ್ನು ಸ್ವೀಕರಿಸುತ್ತಾನೆ. ಹೀಗೆ ಮನಸ್ಸಿಗೆ ಮುದ ನೀಡುವ, ಉಲ್ಲಾಸ ಉತ್ಸಾಹಗಳನ್ನುಂಟುಮಾಡುವ ಆಸರೆಗಳಲ್ಲಿ ಭಗವಂತನ ಶಕ್ತಿರೂಪವೂ ಒಂದು.



## ಪರತತ್ತ್ವ ಶಕ್ತಿರೂಪ

ವಿಶ್ವಾತ್ಮಕವಾಗಿ ವಿಕಾಸಗೊಂಡಿರುವ ಭಗವಂತನ ಶಕ್ತಿ ಪ್ರಪಂಚದ ಪ್ರತಿಯೊಂದು ಅಣು ಅಣುವಿನಲ್ಲೂ ವಿಶಿಷ್ಟವಾಗಿ ವ್ಯಕ್ತಗೊಂಡಿದೆ. ಆದುದರಿಂದ ಈ ಶಕ್ತಿಗೆ ಸ್ಥಾನ ನೀಡದ ಮತವೇ ಇಲ್ಲ ಎಂದಿದ್ದಾರೆ ಶ್ರೀರಾಮಕೃಷ್ಣರು. ಬೆಂಕಿ ಎಂದ ಕೂಡಲೆ ಅದರ ಸುಡುವ ಶಕ್ತಿಯ ಜೊತೆಯಲ್ಲೇ ಅದರ ಅರಿವು ನಮಗೆ ಬರುವುದು. ಸುಡುವಿಕೆಯಿಂದ ಬೆಂಕಿ ಎಂದೂ ಬೇರೆಯಾಗಿರಲು ಸಾಧ್ಯವೇ ಇಲ್ಲ. ಹೀಗೆ ಶಕ್ತಿ ವಸ್ತುಗಳ ಸಂಬಂಧ ಅವಿನಾ

ಭಾವದಿಂದ ಕೂಡಿದೆ. ಅದೇ ರೀತಿಯಲ್ಲಿ ಉಮಾಮಹೇಶ್ವರ, ಲಕ್ಷ್ಮೀನಾರಾಯಣ... ಇವರೆಲ್ಲ ವಿಭಿನ್ನರಾಗಿ ಕಂಡರೂ ಅವರು ಒಂದೇ ಬ್ರಹ್ಮ ವಸ್ತುವನ್ನು ಪ್ರತಿನಿಧಿಸುವರು. ಇಂತಹ ಒಂದು ತತ್ತ್ವವನ್ನು ಮಾನವನು ತನ್ನ ಮನದ ಆಸರೆಯಾಗಿ ಅವಲಂಬಿಸಲು ಬಯಸುವುದಾದರೆ ಅದಕ್ಕೆ ಮಾತೃಭಾವಕ್ಕಿಂತ ಉದಾತ್ತವೂ ಉದಾರವೂ ಹೃದಯಂಗಮವೂ ಆಪ್ಯಾಯಮಾನವೂ ಆದದ್ದು ಮತ್ತೊಂದು ದೊರಕುವುದಿಲ್ಲ. **'ಯಾ ದೇವಿ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ'** ಎಂಬಂತೆ ಜೀವ ಗಂಡೋ ಹೆಣ್ಣೋ ಎಲ್ಲದರಲ್ಲೂ ವಾತ್ಸಲ್ಯ ಪ್ರೀತಿ ಸಂರಕ್ಷಕ ಭಾವ.. ಇತ್ಯಾದಿ ರೂಪದಲ್ಲಿ ಆ ಮಾತೃತ್ವವು ಒಂದಲ್ಲ ಒಮ್ಮೆ ವ್ಯಕ್ತವಾಗುವುದು ಜೀವನದಲ್ಲಿ ಎಲ್ಲರ ಅನುಭವದಲ್ಲಿದೆ. ಹಾಗಾಗಿ ಮಾತೃಭಾವದ ದೇವಿಯ ಆರಾಧನೆ ಉಪಾಸನೆ ಎಲ್ಲರಿಗೂ ಹಿತವೆನ್ನಿಸಿ ವಿಶೇಷವಾಗಿ ಪ್ರಚಲಿತವಾಗಿರುವುದು ಲೋಕದಲ್ಲಿ ಕಂಡುಬರುತ್ತದೆ.

## 'ದೇವೀ' ನಾಮ ನಿರ್ವಚನ

ವೇದಗಳಲ್ಲಿ ವಿವಿಧ ನಾಮ ರೂಪದ ದೇವಿಯ ಸೂಕ್ತಿಗಳು ಕಂಡು ಬರುತ್ತವೆ. ಸರಸ್ವತೀ, ಉಷಾ, ಅದಿತಿ, ಗಾಯತ್ರೀ, ಸಾವಿತ್ರೀ, ತ್ರಿಪುರಾ, ಮೇಧಾ, ದೇವೀ ಸೂಕ್ತಗಳು ಅತ್ಯಂತ ಪ್ರಸಿದ್ಧವಾಗಿವೆ. ತ್ರಿಪುರೋಪನಿಷತ್ತು, ದೇವ್ಯುಪನಿಷತ್ತು, ಭಾವನೋಪನಿಷತ್ತು, ಸರಸ್ವತಿರಹಸ್ಯೋಪನಿಷತ್ತು, ಸೀತೋಪನಿಷತ್ತು ಇತ್ಯಾದಿ ಶಕ್ತಿದೇವತಾ ತತ್ತ್ವಪ್ರತಿಪಾದಕ ಅನೇಕ ಉಪನಿಷತ್ತಗಳೂ ದೇವಿಯ ಆರಾಧನೆ ಉಪಾಸನೆಗೆ ವಿಶೇಷ ಪ್ರಾಮುಖ್ಯವನ್ನು ನೀಡಿವೆ. 'ದಿವ್' ಧಾತುವಿನಿಂದ ಈ 'ದೇವೀ' ಪದವುಂಟಾಗಿದೆ. ದಿವ್ ಧಾತುವಿಗೆ ದಾನ, ದೀಪನ, ವಿಜಯ, ಕ್ರೀಡಾ, ದ್ಯೋತಕ ಇತ್ಯಾದಿ ಅನೇಕ ಅರ್ಥಗಳಿವೆ. **'ಯತೋ ದೀಪ್ಯತಿ ಕ್ರೀಡತಿ ಸರ್ಗಾದಿಭಿಃ ವಿಜಿಗೀಷತೇಽಸುರಾದೀನ್ ವ್ಯವಹರತಿ ಸರ್ವಭೂತೇಷು ಆತ್ಮತಯಾ ದ್ಯೋತತೇ ಸ್ತೂಯತೇ ಸ್ತುತ್ಯೈಃ ಸರ್ವತ್ರ ಗಚ್ಛತಿ ತಸ್ಮಾದ್ದೇವೀ ಇತಿ ಮಂತ್ರವರ್ಣಾತ್'** ಎಂದು ದೇವಿ ಶಬ್ದಕ್ಕೆ ನಿರ್ವಚನವಿದೆ. ಸೃಷ್ಟಿ ಮೊದಲಾದ ಲೀಲೆಗಳನ್ನು ಮಾಡುತ್ತಾಳೆ, ಅಸುರ ಮೊದಲಾದವರ ದುಷ್ಟಭಾವನೆ ದುರ್ಬುದ್ಧಿಗಳ ಮೇಲೆ ಗೆಲುವನ್ನು ಸಾಧಿಸುತ್ತಾಳೆ. ಸಕಲಜೀವಕೋಟಿಗಳಲ್ಲಿ ಆತ್ಮರೂಪದಿಂದ ಬೆಳಗುತ್ತಾಳೆ. ಎಲ್ಲವನ್ನೂ ತುಂಬಿಕೊಂಡು ಎಲ್ಲದರ ಒಳಗೂ, ಬಳಿಯೂ ಇದ್ದಾಳೆ. ಈ ಎಲ್ಲಾ ಕಾರಣಗಳಿಂದ ಅವಳು ದೇವಿ.

## ದೇವೀ ತತ್ತ್ವಸ್ವರೂಪ

ಈ ದೇವಿಯ ಪರಿಪೂರ್ಣವಾದ ತಾತ್ತ್ವಿಕ, ಭೌತಿಕ, ಆಧ್ಯಾತ್ಮಿಕ ಸ್ವರೂಪದ ಆವಿಷ್ಕರಣವನ್ನು ವಾಕ್ ಎಂಬ ಆಂಭೃಣ ಋಷಿಯ ಮಗಳು ತಾನು ಕಂಡುಂಡ ಬಗೆಯನ್ನು 'ದೇವೀಸೂಕ್ತ'ದಲ್ಲಿ ಸುಂದರವಾಗಿ ನಿರೂಪಿಸಿದ್ದಾಳೆ: 'ಅಹಂ' ಎಂದು ಲೋಕದಲ್ಲಿ ಇರುವ ಸಮಸ್ತವನ್ನೂ ತುಂಬಿಕೊಂಡಿರುವ ತತ್ತ್ವವಾಚ್ಯಳೇ ಆ ದೇವಿ. ಅವಳು ರುದ್ರ ವಸು ಆದಿತ್ಯ ವಿಶ್ವೇದೇವ ಮೊದಲಾದ ದೇವತೆಗಳ ಒಡನಾಡಿಯಾಗಿರುವಳು, ಸಮಸ್ತ ಜಗತ್ತಿಗೆ ಒಡತಿ, ಅವರವರಿಗೆ ಅವರವರ ಪಾಲಿನ ಐಶ್ವರ್ಯವನ್ನು ವಿಭಜಿಸಿ ಕೊಡುವವಳು. ಯಜ್ಞಾರ್ಹರಾದ ದೇವತೆಗಳ ಮಧ್ಯದಲ್ಲಿ ಶ್ರೇಷ್ಠಳಾದವಳು. ತಿನ್ನುವುದು, ನೋಡುವುದು, ಉಸಿರಾಡುವುದು ಮುಂತಾದ ಜೀವಿಗಳ ಸಕಲ ವಿಧದ ಚಟುವಟಿಕೆಗೆ ಕಾರಣ ಕರ್ತಳು. ಯಾರನ್ನು ಒಲಿಯುವಳೋ ಅವರನ್ನು ಬಲಿಷ್ಠರನ್ನಾಗಿ, ಋಷಿಗಳನ್ನಾಗಿ, ಪ್ರಾಜ್ಞರನ್ನಾಗಿ, 'ಬ್ರಹ್ಮ'ನನ್ನಾಗಿ ಮಾಡುವಳು. ಬ್ರಹ್ಮನಾಶಕರಾದ ಅಸುರರ ಮದ ಭಂಜಿಸಲು ರುದ್ರನ ಕೈಯ ಧನುವಾಗಿ ಇರುವಳು. ಅವಳು ಲೋಕಗಳನ್ನೆಲ್ಲಾ ವ್ಯಾಪಿಸಿಕೊಂಡಿರುವವಳು.

ಇದೇ ದೇವಿಯನ್ನು ಚಂಡೀ ಎಂದೇ ಪ್ರಸಿದ್ಧವಾಗಿರುವ 'ದುರ್ಗಾಸಪ್ತಶತೀ' ಕೃತಿಯು ಹೀಗೆ ನಿರೂಪಿಸುತ್ತದೆ : ಸೃಷ್ಟಿಯ ನಿರಂತರತೆಯನ್ನು ಕಾಪಾಡಲು ಈ ದೇವಿ ಮಹಾಮಾಯೆಯ ಸ್ವರೂಪವನ್ನು ತಳೆಯುತ್ತಾಳೆ. ಈ ಮಾಯಾಪ್ರಭಾವದಿಂದ ಸಕಲ ಜೀವಿಗಳನ್ನು ಜ್ಞಾನಿಗಳನ್ನು ಮಮತೆ ಎಂಬ ಹಳ್ಳದಲ್ಲಿ ಬೀಳಿಸುತ್ತಾಳೆ. ಮೋಹಜಾಲದಲ್ಲಿ ಕೆಡವಿಬಿಡುತ್ತಾಳೆ. ಅದೇ ಅವಳು ಪ್ರಸನ್ನಳಾದರೆ ವರಗಳನ್ನೂ ಮುಕ್ತಿಯನ್ನೂ ಕೊಡುತ್ತಾಳೆ. ಮುಕ್ತಿಗೆ ಕಾರಣವಾದ ಸನಾತನ ಪರಮಜ್ಞಾನರೂಪಿಣಿ ಮಹಾಮೇಧಾ ಇವಳು. ಇವಳ ಪ್ರಭಾವವನ್ನು ಬ್ರಹ್ಮ, ವಿಷ್ಣು, ಮಹೇಶ್ವರರೂ ವರ್ಣಿಸಲಾರರು. ಇವಳು ವೇದಮಾತೆ. ಭವ ಎಂಬ ಈ ಸಂಸಾರ ಸಾಗರದಿಂದ ದಾಟಿಸುವ ನೌಕೆ ಇವಳೇ. ವಿಷ್ಣುವಿನ ಹೃದಯ ನಿವಾಸಿನಿ ಲಕ್ಷ್ಮೀಯೂ ಶಿವನ ಅರ್ಧಶರೀರಿಣಿಯಾದ ಉಮೆಯೂ ಬ್ರಹ್ಮನ ಮುಖದಲ್ಲಿ ನೆಲೆಸಿರುವ ಸರಸ್ವತಿಯೂ ಇವಳೇ. ಎಲ್ಲರಿಗೆ ಉಪಕಾರ ಮಾಡಲಿಕ್ಕಾಗಿ ಸದಾ ಆರ್ದ್ರ ಹೃದಯದಿಂದ ಸ್ನೇಹ ಪ್ರೀತಿ ಭಾವಗಳಿಂದ ಕಾತರಗೊಂಡಿರುವ ಮಹಾಜನನಿ ಇವಳು. ಇವಳ ಹೊರತು 'ಏಕೈವಾಹಂ ಜಗತ್ಯತ್ರ ದ್ವಿತೀಯಾ ಕಾ ಮಮಾಪರಾ' ಎರಡನೆಯದು ಮತ್ತೊಂದಿಲ್ಲ. ಇಂತಹ ದೇವಿಯನ್ನು ಆರಾಧಿಸಿದರೆ ಅವಳು ಸ್ವರ್ಗ ಅಪವರ್ಗಗಳನ್ನು ಕೊಡುವಳು.

## ಉಪಾಸನಾತತ್ತ್ವ

ಇಂತಹ ಸರ್ವವ್ಯಾಪಕ ಸರ್ವಸಾಧಕ ಪರಮ ಶಕ್ತಿಯ ಅನುಗ್ರಹ ಇಲ್ಲದೆ ಏನನ್ನೂ ಸಾಧಿಸಲು ಸಾಧ್ಯವಿಲ್ಲ. ಆದುದರಿಂದ ಈ ದೇವಿಯ ಉಪಾಸನೆ ಆರಾಧನೆಗಳು ವೇದಕಾಲದಿಂದ ತಪ್ಪದೆ ಅನೂಚಾನವಾಗಿ ನಡೆದುಕೊಂಡು ಬಂದಿವೆ. ಶಬ್ದಗಳು ಮತ್ತು ಅವು ಸೂಚಿಸುವ ವಿಷಯಗಳೂ ದೇವಿಯ ಅಭಿವ್ಯಕ್ತಿಗಳೇ ಆಗಿವೆ. ದೇವಿ ಶರೀರಿಯಾದರೆ ಶಬ್ದಾರ್ಥಗಳು ಶರೀರ. ವರ್ಣಗಳಿಂದ ಶಬ್ದಗಳಾಗಿರುವುದರಿಂದ ಪ್ರತಿ ವರ್ಣದಲ್ಲಿಯೂ ಶಕ್ತಿ ಅಂತರ್ನಿಹಿತವಾಗಿದೆ. ಆದುದರಿಂದ ಪ್ರತಿ ವರ್ಣವೂ ಶಕ್ತಿಯ ಪ್ರತೀಕ, ಆದುದರಿಂದ ಈ ವರ್ಣಕ್ಕೆ ಮಾತೃಕೆ ಎಂದು ಹೆಸರು. ಹಾಗಾಗಿ ಈ ವರ್ಣಗಳ ಸಮೂಹದಿಂದ ಮಂತ್ರ, ಅದು ಸಂಕೇತಿಸುತ್ತಿರುವ ದೇವತೆಗಿಂತ ಭಿನ್ನವಾಗುವುದಿಲ್ಲ. ಹಾಗಾಗಿ ಮಂತ್ರ

ಮತ್ತು ಆ ಮಂತ್ರ ಪ್ರತಿಪಾದಿತ ದೇವತೆ – ಅಭಿನ್ನವಾದವು. ಆದುದರಿಂದ ಯಾವುದೇ ಕಲ್ಲು ಲೋಹ ಮರ ಮುಂತಾದುವುಗಳಿಂದ ನಿರ್ಮಿತವಾದ ವಿಗ್ರಹರೂಪವನ್ನು ಮಾತ್ರ ದೇವತೆ ಎಂದು ತಿಳಿಯುವುದು ಅನುಚಿತವಾಗುವುದು. ಈ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರ ಈ ಮಾತು ಮನನೀಯ : ''ನೋಡಿ, ಇದೊಂದು ಹೊರಗಡೆ ಕವಚ ಮಾತ್ರ. ಇದರ ಮೂಲಕ ಶುದ್ಧ ಬೋಧಾನಂದಮಯಿ ತಾಯಿ ಲೋಕಕ್ಕೆ ಶಿಕ್ಷಣ ಕೊಡುತ್ತಿರುವಳು. ಆದ ಕಾರಣವೇ ಇದನ್ನು ಯಾರು ಸ್ಪರ್ಶ ಮಾಡುವರೋ, ಇದಕ್ಕೆ ಸೇವೆ ಮಾಡುವರೋ, ಅವರ ಧರ್ಮ ಭಾವನೆ ಉದ್ದೀಪನೆಯಾಗಿ ಈಶ್ವರಲಾಭವಾಗುವುದು.''

ಶಬ್ದ, ಶಬ್ದವು ತೋರಿಸುವ ವಸ್ತು, ವ್ಯಕ್ತಿ, ವಿಷಯ ಇವುಗಳ ಸಂಬಂಧವನ್ನು ಅನುಸಂಧಾನ ಮಾಡುತ್ತಾ ಶಬ್ದ ಅರ್ಥಗಳ ಅವಿನಾಭಾವ ಬಂಧವನ್ನರಿತು ಉಪಾಸನೆ ಮಾಡಿದಾಗ ಪೂಜೆ, ಪೂಜಾಸಾಮಗ್ರಿ ಪೂಜಾ ಕಾಲದಲ್ಲಿ ಉಪಯೋಗಿಸುವ (ಮಂತ್ರ) ಸಾಹಿತ್ಯ ಸಾಮಗ್ರಿ ಇತ್ಯಾದಿ ಎಲ್ಲವೂ ಚಿಚ್ಛಕ್ತಿ ಚಿದ್ವಿಲಾಸಗಳ ರೂಪಾಭಿವ್ಯಕ್ತಿಗಳಾಗಿ ಪರಿವರ್ತಿತವಾಗಿಬಿಡುತ್ತವೆ. ಇದನ್ನು ಸಾಧಿಸಲಿಕ್ಕಾಗಿಯೇ ಉಪಾಸನಾವಿಧಿಯಲ್ಲಿ ನ್ಯಾಸ, ಭೂತಶುದ್ಧಿ, ಪ್ರಾಣಾಯಾಮ, ಧ್ಯಾನ, ಪ್ರಾಣಪ್ರತಿಷ್ಠಾದಿ ಕ್ರಮಗಳನ್ನು ವಿಧಿಸಲಾಗಿದೆ. ಆರಾಧಿಸಲು ಸಂಕಲ್ಪಿಸಿಕೊಂಡಿರುವ ದೇವತೆಯ ಪ್ರಾಣವೇ ನನ್ನ ಪ್ರಾಣ; ಆ ದೇವತೆಯ ಜೀವವೇ ನನ್ನ ಜೀವ; ಅದು ನಾನು, ನಾನು ಅದು; ಮಾತು ಮನ ಕಣ್ಣು ಕಿವಿ ನಾಲಿಗೆ ಮೂಗು ಮೊದಲಾದ ಇಂದ್ರಿಯಗಳಿಂದ ಆ ದೇವತಾಶಕ್ತಿ ಹೊರಬಂದು (ಸಂಕಲ್ಪಿಸಿ ಕೊಂಡಿರುವ) ಈ ಬಿಂಬದಲ್ಲಿ ನಾನು ಪೂಜೆ ಆರಾಧನೆ ಮಾಡುವಲ್ಲಿಯವರೆಗೆ ಪ್ರೀತಿಭಾವದಿಂದ ಸುಖವಾಗಿ ನೆಲೆಸಿರಲಿ ಎಂದು ಬಿಂಬದಲ್ಲಿ ಪ್ರಾಣಪ್ರತಿಷ್ಠೆ ಮಾಡುವುದರಿಂದ ಅದು ಈಗ ಕೇವಲ ಒಂದು ಜಡವಸ್ತುವಲ್ಲ; ಆದುದರಿಂದಲೇ ಅದನ್ನು ಇಷ್ಟದೈವ; ಮನೆಗೆ ಬಂದ ಇಷ್ಟ ಬಂಧು, ಮಿತ್ರ ಎಂದು ಭಾವಿಸಿ ಬಂದವರಿಗೆ ಮಾಡುವ, ಕಾಲಿಗೆ ಕೈಗೆ ನೀರು, ಕುಡಿಯಲು ನೀರು, ಒರೆಸಿಕೊಳ್ಳಲು ವಸ್ತ್ರ ಇತ್ಯಾದಿ ರೀತಿ ಸಕಲ ಸತ್ಕಾರಗಳನ್ನು ಮಾಡಲಾಗುವುದು. ಈ ರೀತಿಯ ಪೂಜಾ ಕರ್ಮಾನುಷ್ಠಾನವು ಪೂಜಿಸುವವನನ್ನು, ಪೂಜೆಗೊಳ್ಳುವುದನ್ನು ಪೂಜೆಯ ಸಾಧನೆ ಕ್ರಿಯೆ ಎಲ್ಲವನ್ನೂ ಚೈತನ್ಯವಾಗಿ ಮಾರ್ಪಡಿಸಿ 'ತ್ವಂ' ಮತ್ತು 'ತತ್' ತತ್ತ್ವಗಳಲ್ಲಿ ತಾದಾತ್ಮ್ಯವನ್ನು ಸಾಧಿಸಿ ಕೊಡುತ್ತದೆ. ತನ್ಮೂಲಕ ಜೀವಿ ತನ್ನ ಜೀವನದ ಪರಮಫಲವನ್ನು ಹೊಂದಲು ಸಹಾಯಕವಾಗುತ್ತದೆ.

ಈ ರೀತಿಯ ದೇವಿಯ ಆರಾಧನೆ ಉಪಾಸನೆ ಜೀವಿಯ ದಿನದ ಚಟುವಟಿಕೆಗಳ ಅವಿಭಾಜ್ಯ ಅಂಗವಾಗಿರಬೇಕೆಂದೇ ಶಾಸ್ತ್ರಗಳು ವಿಧಿಸುತ್ತವೆ. ನಮ್ಮನ್ನು ಆ ಶಕ್ತಿಗೆ ಯಂತ್ರವಾಗಿಸಿಕೊಂಡು ಆ ಶಕ್ತಿಯ ಆಜ್ಞೆ ಇಚ್ಛೆ ಸಂಕಲ್ಪಕ್ಕೆ ಅನುಗುಣವಾಗಿ ಜೀವನದ ಪ್ರತಿದಿನದ ಪ್ರತಿ ಚಟುವಟಿಕೆಯನ್ನೂ ನಡೆಸುತ್ತಾ, ಆ ಚಟುವಟಿಕೆಗಳನ್ನು ಹಾಗೂ ಅದರ ಫಲಗಳನ್ನು ಆ ದೇವಿಗೇ ಅರ್ಪಿಸುವುದು, ಆ ದೇವಿ ಮೆಚ್ಚುವ ಪರಮ ಆರಾಧನೆಯಾಗಿದೆ. ಆದ್ದರಿಂದಲೇ ಶ್ರೀರಾಮಕೃಷ್ಣರು, '' 'ಆಮಾರ್ ಆಮಾರ್' ('ನನ್ನದು, ನನ್ನದು') ಎಂಬುದೇ ಎಲ್ಲ ಸಂಕಷ್ಟಕ್ಕೂ ದುಃಖ ದೌರ್ಮನಸ್ಯಕ್ಕೂ ಕಾರಣ. ಆ 'ಆ' ತೆಗೆದುಬಿಟ್ಟರೆ ಮಾರ್–ಮಾಯೇರ್ –'ಅಮ್ಮನದು' ಎನ್ನತೊಡಗಿದರೆ ನಮ್ಮ ಜೀವನ ಸರ್ವಸುಖದ ಬೀಡಾಗುವುದು'' ಎನ್ನುವರು.

## ದುರ್ಗಾ ಸ್ವರೂಪ

ಜೀವಿಯ ಪ್ರತಿದಿನದ ಪ್ರತಿ ಚಟುವಟಿಕೆಯ ಅವಿಭಾಜ್ಯ ಅಂಗವಾಗಿರುವ ದೇವಿ, ಆಷಾಢ, ಶ್ರಾವಣ, ಆಶ್ವಯುಜ, ಕಾರ್ತಿಕ ಮೊದಲಾದ ಮಾಸಗಳಲ್ಲಿ ಮಹಾಕಾಳೀ, ಮಹಾಲಕ್ಷ್ಮೀ, ಮಹಾಸರಸ್ವತೀ, ಕಾಳರಾತ್ರಿ, ಮೋಹರಾತ್ರಿ, ಮಹಾರಾತ್ರಿ ಮುಂತಾದ ರೂಪಗಳಲ್ಲಿ ವಿಶೇಷವಾಗಿ ಆರಾಧಿಸಲ್ಪಡುತ್ತಾಳೆ. ಇವಳೇ ಮಹಾವಿಘ್ನರೂಪ ದೈತ್ಯನನ್ನು ಭವಬಂಧನವನ್ನೂ ಕುಕರ್ಮಗಳನ್ನೂ, ಶೋಕ ದುಃಖ ನರಕ, ಯಮದಂಡ, ಮಹಾಭಯ, ಅತಿರೋಗ ಮುಂತಾದವುಗಳನ್ನೂ ದೂರ ಮಾಡಿ ಜೀವಿಗೆ ಆತ್ಯಂತಿಕ ಸುಖವನ್ನುಂಟುಮಾಡುವವಳಾದ ಕಾರಣ 'ದುರ್ಗಾ' ಎನಿಸಿಕೊಂಡಿದ್ದಾಳೆ. ಈ 'ದುರ್ಗಾ' ಪದದಲ್ಲಿ 'ದ'ಕಾರವು ದೇವಿಯ ಎಲ್ಲ ವಿಧವಾದ ದೈತ್ಯ–ನಾಶಕತೆಯನ್ನು ಸೂಚಿಸುತ್ತದೆ, 'ಉ'ಕಾರವು ವಿಘ್ನನಾಶಕ ಗುಣಧರ್ಮವನ್ನೂ, 'ರ' ಕಾರವು ರೋಗನಾಶಕತೆಯನ್ನೂ 'ಗ' ಕಾರವು ಪಾಪದೂರ ಮಾಡುವ ಸ್ವಭಾವವನ್ನೂ, 'ಆ'ಕಾರವು ಭಯದ, ಶತ್ರುಗಳ ನಿವಾರಕ ಧರ್ಮವನ್ನೂ ಸೂಚಿಸುತ್ತದೆ ಎಂದು ನಾಮ ನಿರ್ವಚನವು ತಿಳಿಸುತ್ತದೆ.

## ಉಪಸಂಹಾರ

ಹೀಗೆ ಸೃಷ್ಟ್ಯಾದಿಕಾಲದಿಂದ ಅನೂಚಾನವಾಗಿ ನಡೆದು ಬಂದಿರುವ ದೇವಿಯ ಉಪಾಸನೆಯನ್ನು ಶರೀರ ಮನಸ್ಸು, ಬುದ್ಧಿಗಳಿಂದ, ಶ್ರದ್ಧಾಭಕ್ತಿನಿಷ್ಠೆಯಿಂದ ಆಚರಿಸಲು ಅಗತ್ಯವಾದ ಏಕಾಗ್ರತೆ, ಜ್ಞಾನ, ತನ್ಮಯತೆಗಳನ್ನಿತ್ತು ಸಲಹಬೇಕೆಂದು ದೇವಿಯಲ್ಲಿ ಹೃದಯಪೂರ್ವಕ ಪ್ರಾರ್ಥಿಸೋಣ. ✽

ನಾವು ಬಡವನಲ್ಲಿ ದೇವರನ್ನು ನೋಡಬೇಕು. ನಮ್ಮ ಮುಕ್ತಿಗಾಗಿ ನಾವು ಅವರ ಪೂಜೆ ಮಾಡಬೇಕು. ದೀನರು, ದುಃಖಿಗಳು ನಮ್ಮ ಮೋಕ್ಷಕ್ಕಾಗಿಯೇ ಇರುವರು. ರೋಗಿಯಂತೆ, ಹುಚ್ಚನಂತೆ, ಕುಷ್ಠರೋಗಿಯಂತೆ, ಪಾಪಿಯಂತೆ ದೇವರು ಬರುವನು. ಇವು ನನ್ನ ಕೆಚ್ಚಿನ ನುಡಿಗಳು. ಭಗವಂತನನ್ನು ಹಲವು ರೂಪಗಳಲ್ಲಿ ಆರಾಧಿಸುವುದಕ್ಕೆ ನನಗೆ ಅವಕಾಶ ದೊರಕಿಸಿರುವುದು ಮಹಾಪುಣ್ಯವೆಂದು ಸಾರುತ್ತೇನೆ.

— ಸ್ವಾಮಿ ವಿವೇಕಾನಂದ